# ಸಮಷ್ಟಿ ಪ್ರಜ್ಞೆಯ ಪತನ

ಹಿಂದೆ ನಮ್ಮ ಹಿರಿಯರು ಮಾತನಾಡುವಾಗ ಕಾಲ ಈಗ ಹಿಂದಿನಂತಿಲ್ಲ, ಮೌಲ್ಯಗಳು ಕುಸಿಯುತ್ತಿವೆ ಎನ್ನುತ್ತಿದ್ದರು. ಈಗಲೂ ಹಾಗೆಯೆ ಹೇಳಿದರೆ ಕ್ಲೀಷೆ ಎನಿಸುತ್ತದೆ. ಮೌಲ್ಯಗಳು ಈಗ ಹಳ್ಳ ಹಿಡಿದಿವೆ, ನಾಶವಾಗಿವೆ ಎಂದು ಹೇಳಬೇಕು. ಅದಕ್ಕೆ ಕಾರಣವನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಸಮಾಜದ ಸಮಷ್ಟಿ ಪ್ರಜ್ಞೆಗೆ ಹುಳ ಹಿಡಿದಿದೆ ಎಂದು ಹೇಳಹುದು. ನಮ್ಮ ಸಂವಿಧಾನದ ಮೂಲ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳು ಮಸುಕಾಗಿದ್ದು ಅವುಗಳ ಜಾಗದಲ್ಲಿ ಜಾತೀಯತೆ, ಕೋಮುವಾದ ಮತ್ತು ಭ್ರಷ್ಟಾಚಾರಗಳು ತಾಂಡವವಾಡುತ್ತಿವೆ. ಈಗ ಅವುಗಳೇ ಮೌಲ್ಯಗಳು.

ನೆರೆರಾಜ್ಯದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಮುಖ್ಯಮಂತ್ರಿಯೊಬ್ಬರು ಆಸ್ಪತ್ರೆ ಸೇರಿದರು. ಅವರ ಅನುಪಸ್ಥಿತಿಯಲ್ಲಿ ನಿಯೋಜಿತರಾಗಿದ್ದ ಉಸ್ತುವಾರಿ ಮುಖ್ಯಮಂತ್ರಿ ಆ ಕುರ್ಚಿಯನ್ನು ಅಲಂಕರಿಸಲು ಒಪ್ಪಲಿಲ್ಲ. ಬದಲಾಗಿ ಕುರ್ಚಿಯ ಮೇಲೆ ಅಮ್ಮನ ಫೋಟೋ ಇಟ್ಟು ಪೂಜಿಸಿ ಪಕ್ಕದಲ್ಲಿಯೆ ಒಂದು ಕುರ್ಚಿ ಹಾಕಿಕೊಂಡು ಕುಳಿತರು. ಇದು ಭಟ್ಟಂಗಿತನದ ಪರಾಕಾಷ್ಠೆ ಎಂದು ಲೋಕ ಹೀಯಾಳಿಸಿದರೂ ಅವರಿಗೆ ನಾಚಿಕೆಯಾಗಲಿಲ್ಲ. ಆ ಅಮ್ಮ ಭಾರೀ ಭ್ರಷ್ಟತನದ ಆರೋಪ ಹೊತ್ತಿದ್ದರೂ ಮತ್ತೆ ಮತ್ತೆ ಗೆದ್ದು ಗದ್ದುಗೆ ಏರುತ್ತಿದ್ದರು. ಯಥಾಪ್ರಕಾರ  ಸರ್ವೋಚ್ಛನ್ಯಾಯಾಲಯದ ಅಂತಿಮ ತೀರ್ಪು ಒಂದೂವರೆ ದಶಕಗಳ ನಂತರ ಹೊರಬಿದ್ದಿತು. ಅಮ್ಮ ಆಗ ಸ್ವರ್ಗಸ್ಥರಾಗಿದ್ದರು. ಉಳಿದ ಪಾಲುದಾರರು ಜೈಲುಪಾಲಾದರು. ತೀರ್ಪಿನ ನಂತರವೂ ಅಮ್ಮನವರ ವರ್ಚಸ್ಸಿಗೆ ಕಿಂಚಿತ್ತೂ ಕುಂದುಂಟಾಗಲಿಲ್ಲ. ಇಡೀ ರಾಜ್ಯ ಏಕಪ್ರಕಾರವಾಗಿ ಅಮ್ಮನನ್ನು ದೈವೀಕರಿಸಿಬಿಟ್ಟಿತ್ತು. ಮುಂದೆ ಗದ್ದುಗೆ ಏರಬೇಕಾಗಿದ್ದ ರಾಜಕೀಯ ನಾಯಕರು ಅಮ್ಮನ ಸಮಾಧಿಗೆ ತೆರಳಿ ಮಣ್ಣನ್ನು ತಲೆಯ ಮೇಲೆ ಎರೆದುಕೊಂಡರು. ಅವರ ನಡವಳಿಕೆ ಸರ್ವೋಚ್ಛನ್ಯಾಯಾಲಯದ ತೀರ್ಪನ್ನು ಅಣಕಿಸುವಂತಿತ್ತು. ಒಂದು ಸಮಾಜದ ಇಂತಹ ವಿಪರೀತದ, ವ್ಯತಿರಿಕ್ತದ ಸಾಮೂಹಿಕ ನಡವಳಿಕೆಗೆ ಕಾರಣವೇನು? ಅಮ್ಮನವರು ಬಡಜನರಿಗೆ ಉದಾರಿಯಾಗಿದ್ದರು ಎಂದುಕೊಳ್ಳೋಣ. ಅವರ ಸರ್ಕಾರದ ಯೋಜನೆಗಳು ಉಡುಗೊರೆ ಪ್ರಧಾನವಾಗಿದ್ದವು. ಸಾರ್ವಜನಿಕ ಹಣದಲ್ಲಿ ಕಡಿಮೆ ಬೆಲೆಯಲ್ಲಿ ಟಿ.ವಿ ಸೀರೆ ಇತ್ಯಾದಿ ಗ್ರಾಹಕ ವಸ್ತುಗಳನ್ನು ನೀಡುವುದು ಇಲ್ಲದವರನ್ನು ಅದೇ ಸ್ಥಿತಿಯಲ್ಲಿ ಇಡುವ ಹುನ್ನಾರ. ಅದನ್ನರಿಯದ ಅರೆಶಿಕ್ಷಿತ ಜನಸಮುದಾಯಕ್ಕೆ ಅಂಥ ನಾಯಕರು ದೇವರೇ ಆಗಿಬಿಡುವುದು ಆಶ್ಚರ್ಯವೇನಲ್ಲ.

ಪಕ್ಕದ ರಾಜ್ಯದ ಮತ್ತೊಬ್ಬ ಮುಖ್ಯಮಂತ್ರಿ ತಿರುಪತಿ ತಿಮ್ಮಪ್ಪನಿಗೆ ಐದೂವರೆ ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ದಾನಮಾಡಿದರು. ಅದೂ ಸಹ ರಾಜ್ಯದ ಬೊಕ್ಕಸದಿಂದ. ಅಲ್ಲಿನ ಜನರಿಂದ ಪ್ರತಿಕ್ರಿಯೆಯೇನೂ ಇರಲಿಲ್ಲ. ಬುದ್ಧಿಜೀವಿಗಳು, ಪ್ರಜ್ಞಾವಂತರೂ ಹೆಚ್ಚು ಮಾತಾಡಲಿಲ್ಲ. ಸಂವಿಧಾನದ ಜಾತ್ಯತೀತ ಆಶಯವನ್ನೆ ಅವರು ಮಣ್ಣುಪಾಲು ಮಾಡಿಬಿಟ್ಟರು. ಇಂಥವರು ತಮ್ಮದಲ್ಲದ ಸಂಪತ್ತಿನಿಂದ ಮಾಡುವ ದಾನ ಯಾರ ಪುಣ್ಯಕ್ಕೆ? ಅವರ ಸ್ವಂತಕ್ಕೊ ಅಥವಾ ರಾಜ್ಯಕ್ಕೋ? ಅದು ಸತ್ಕರ್ಮ ಎನಿಸಿಕೊಳ್ಳಲಾರದು. ಅದರಿಂದ ಯಾವ ಫಲವೂ ದೊರಕುವುದಿಲ್ಲ. ಅಭಿವೃದ್ಧಿಯ ಮಾನದಂಡಗಳೆಂದರೆ ಜನರನ್ನು ಆರ್ಥಿಕವಾಗಿ ಸಶಕ್ತಗೊಳಿಸಲು, ಜೀವನ ವಿಧಾನವನ್ನು ಸುಗಮಗೊಳಿಸಲು ಪೂರಕವಾಗಿ ನಿರ್ಮಾಣ ಮಾಡುವ ಮೂಲಭೂತ ಸೌಕರ್ಯಗಳು. ಶಿಕ್ಷಣ, ಆರೋಗ್ಯ ಮತ್ತು ವಸತಿ ಸೌಲಭ್ಯಗಳು ಬಡರಿಗೂ ಸುಲಭಕ್ಕೆ ಸಿಗುವಂತೆ ಮಾಡುವುದು, ಅದಿರಲಿ.

ಬುದ್ಧ ನಾಲ್ಕು ವಿಧದ ಕೊಡುಗೆಗಳನ್ನು ಮತ್ತು ಅವುಗಳಿಂದ ಉಂಟಾಗುವ ಸತ್ಫಲಗಳನ್ನು (merits) ಕುರಿತು ಹೇಳುತ್ತಾನೆ. ಮೊದಲನೆಯದು ಉಡುಗೊರೆ ಬಹಳ ದೊಡ್ಡದು; ಫಲ ಅತಿ ಚಿಕ್ಕದು. ಎರಡನೆಯದು; ಉಡುಗೊರೆಯೂ ಚಿಕ್ಕದು, ಫಲವೂ ಚಿಕ್ಕದು. ಮೂರನೆಯದು ಉಡುಗೊರೆ ಚಿಕ್ಕದಿದ್ದರೂ ಫಲವು ಅತಿ ದೊಡ್ಡದು. ನಾಲ್ಕನೆಯದಾಗಿ ಉಡುಗೊರೆಯೂ ದೊಡ್ಡದು ಮತ್ತು ಅದು ನೀಡುವ ಫಲವೂ ಅತಿ ದೊಡ್ಡದು.

ಮೊದಲನೆಯದಕ್ಕೆ ಉದಾಹರಣೆ, ಮತಿಭ್ರಷ್ಟ ರಾಜಕಾರಿಣಿಗಳು ತಮ್ಮದಲ್ಲದ ಸಂಪತ್ತಿನಿಂದ ಜನರಿಗೆ ನೀಡುವ ಭೌತಿಕ ವಸ್ತುಗಳು ಮತ್ತು ದೇವರಿಗೆ ನೀಡುವ ಬೆಲೆಬಾಳುವ ಆಭರಣಗಳು. ಇದರಿಂದ ಸಿಗುವ ಫಲ ಶೂನ್ಯ.

ಎರಡನೆಯದು ದಾನಿಯು ಜಿಪುಣನಾಗಿದ್ದು ಮುಕ್ತಮನಸಸ್ಸಿಲ್ಲದವನು, ಕೊಡುವ ಉಡುಗೊರೆಯಲ್ಲಿ ತನಗೂ ಸ್ವಲ್ಪ ಇಟ್ಟುಕೊಳ್ಳುವವನು. ಇಲ್ಲಿ ಉಡುಗೊರೆಯೂ ಅಲ್ಪ, ಫಲವೂ ಅತ್ಯಲ್ಪ.

ಮೂರನೆಯದಾಗಿ ಉಡುಗೊರೆಯು ಚಿಕ್ಕದಾಗಿದ್ದರೂ ಫಲವು ಅತೀವ. ಪ್ರೀತಿಯಿಂದ ತನ್ನಲ್ಲಿ ಇರುವುದನ್ನು ಮನಃಪೂರ್ವಕವಾಗಿ ನೀಡುವುದು. ತನ್ನಲ್ಲಿ ಉಂಟಾಗುವ ಅನುಕಂಪೆಯಿಂದ, ಮತ್ತೊಬ್ಬರ ಮೇಲೆ ಕರುಣೆ ತೋರುವ ಕಾರಣದಿಂದ ಕೊಡುವ ಉಡುಗೊರೆ ಇದು. ಇದರಿಂದ ದೊರಕುವ ಲಾಭ ಅಪರಿಮಿತವಾದದ್ದು. ಇದಕ್ಕೆ ಉದಾಹರಣೆಯಾಗಿ ಕರೆಯದೆ ಬರುವ ಕೃಷ್ಣನಿಗೆ ವಿದುರ ನೀಡುವ ಆತಿಥ್ಯವನ್ನು ನೆನಪಿಸಿಕೊಳ್ಳಬಹುದು.

ಕಡೆಯದಾಗಿ ಉಡುಗೊರೆಯೂ ಬಹಳ ದೊಡ್ಡದು ಮತ್ತು ಅದರಿಂದ ಸಿಗುವ ಸತ್ಫಲವೂ ಬಹುದೊಡ್ಡದು. ಬಿಲ್‌ಗೇಟ್ಸ್, ವಾರೆನ್ ಬಫೆಟ್ ಅಜೀಂ ಪ್ರೇಂಜೀ ಮುಂತಾದವರು ತಮ್ಮಪ್ರತಿಷ್ಠಾನಗಳ ಮೂಲಕ ಮಾಡುವ ದಾನ ದತ್ತಿಗಳು ಇದಕ್ಕೆ ಉದಾಹರಣೆ. ತಮ್ಮ ಯಶಸ್ಸಿನ ಒಂದು ಪಾಲನ್ನು ಜನತೆಗೆ ಹಿಂದಿರುಗಿಸುವ ಕ್ರಮ ಹೀಗಿದೆ. ಇದರಿಂದ ಸಿಗುವ ಫಲವೂ ಅತಿ ದೊಡ್ಡದು. ಸೇವೆಯ ಮೂಲಕ ಸತ್ಕಾರ್ಯವನ್ನು ಹೇಗೆ ಮಾಡಬಹುದೆಂಬುದನ್ನು ನಮ್ಮ ಬಂಡವಾಳಶಾಹಿ ಉದ್ಯಮಿಗಳು ಮತ್ತು ಇಂದಿನ ರಾಜಕಾರಿಣಿಗಳು ಕಲಿಯಬೇಕಿದೆ.

**ಮೂಚಿ**

## ಮಾತೇ ಮುತ್ತು

★ ಪ್ರಾಣಿಗಳಲ್ಲೇ ಮನುಷ್ಯ ಅತ್ಯಂತ ಶ್ರೇಷ್ಠ. ಆದರೆ ಕಾನೂನು ಮತ್ತು ನ್ಯಾಯ ಇಲ್ಲದಿದ್ದರೆ ಮನುಷ್ಯನಷ್ಟು ಕ್ರೂರಿ ಯಾರೂ ಇಲ್ಲ.

-ಅರಿಸ್ಟಾಟಲ್

★ ಪ್ರಾಣಕ್ಕಿಂತ ಮಿಗಿಲಾದ ಸಂಪತ್ತು ಯಾವುದೂ ಇಲ್ಲ.

-ಜಾನ್ ರಸ್ಕಿನ್

★ ದೇವರ ಜತೆ ನಾನು ಶಾಂತಿಯಿಂದ ಇದ್ದೇನೆ. ನನ್ನ ಸಂಘರ್ಷ ಇರುವುದೇ ಮನುಷ್ಯರ ಜತೆ.

-ಚಾರ್ಲಿ ಚಾಪ್ಲಿನ್

★ ನಿನ್ನ ಹೃದಯವೇ ಜ್ವಾಲಾಮುಖಿಯಾದರೆ ಹೂವು ಅರಳುವುದನ್ನು ನಿರೀಕ್ಷಿಸುವುದಾದರೂ ಹೇಗೆ?

-ಖಲೀಲ್ ಗಿಬ್ರಾನ್

★ ಒಳಿತನ್ನು ಮಾಡಿದಾಗ ಖುಷಿಯಾಗುತ್ತದೆ. ಕೆಟ್ಟದ್ದನ್ನು ಮಾಡಿದಾಗ ದುಃಖವಾಗುತ್ತದೆ. ಅದೇ ನನ್ನ ಧರ್ಮ.

-ಅಬ್ರಹಾಂ ಲಿಂಕನ್

★ ಕೆಡುಕಿನ ಬೀಜವನ್ನೇ ನಾಶಗೊಳಿಸಿ. ಇಲ್ಲವಾದಲ್ಲಿ ಅದು ನಿಮ್ಮನ್ನು ನಾಶಗೊಳಿಸುವಷ್ಟು ಎತ್ತರಕ್ಕೆ ಬೆಳೆಯುತ್ತದೆ.

-ಇಸೋಪ

★ ಖಡ್ಗದಿಂದ ಗಳಿಸಿದ್ದು ಕೊನೆತನಕ ಉಳಿಯುವ ಖಾತ್ರಿ ಇಲ್ಲ. ಆದರೆ ದಯೆ ಮತ್ತು ಸಂಧಾನದಿಂದ ಪಡೆದದ್ದು ಕೊನೆತನಕ ಉಳಿಯುತ್ತದೆ.

-ಅಲೆಕ್ಸಾಂಡರ್ ದಿ ಗ್ರೇಟ್

★ ಪ್ರೀತಿಯೊಂದೇ ನೈಜ ಚಿನ್ನ.

-ಆಲ್ಫ್ರೆಡ್ ಟೆನಿಸನ್

★ ಅತ್ಯುತ್ತಮವಾದುದನ್ನು ಪಡೆಯುವುದು ಒಂದು ಸತತ ಪ್ರಕ್ರಿಯೆ. ಅದು ಆಕಸ್ಮಿಕ ಅಲ್ಲ.

-ಎ.ಪಿ.ಜೆ.ಕಲಾಂ

★ ಅತ್ಯಂತ ಕೆಟ್ಟದ್ದಕ್ಕೆ ಸಿದ್ಧನಿದ್ದೇನೆ; ಆದರೆ ಸದಾ ಅತ್ಯುತ್ತಮವಾದುದನ್ನೇ ನಿರೀಕ್ಷಿಸುತ್ತೇನೆ.

-ಬೆಂಜಮಿನ್ ಡಿಸ್ರೇಲಿ

★ ಪ್ರೀತಿಯಿಂದ ಸ್ಫೂರ್ತಿ ಹೊಂದಿ, ಜ್ಞಾನದಿಂದ ಮಾರ್ಗದರ್ಶನ ಹೊಂದಿರುವುದೇ ಅತ್ಯುತ್ತಮ ಬಾಳ್ವೆ.

-ಬರ್ಟ್ರೆಂಡ್ ರಸೆಲ್